ವೈಯಕ್ತಿಕ ಮಾಹಿತಿಗಳು ಇರುತ್ತವೆ. ಆ ಮಾಹಿತಿಗಳನ್ನು ಕೂಡ ಚರ್ಚೆಯ ಸಮಯದಲ್ಲಿ ಬಹಿರಂಗಪಡಿಸಬಹುದು. ತಾವು ಸಮಯವನ್ನು ನಿಗದಿ ಮಾಡುತ್ತೀರಿ ಆ ಸಮಯದಲ್ಲಿ ಬಿಜೆಪಿಗೆ ಎಷ್ಟು ಸಮಯ ಸಿಗುತ್ತದೆ ನೋಡಿಕೊಂಡು ಅದರಲ್ಲಿ ಯಾರ್ಯಾರಿಗೆ ಮಾಹಿತಿ ಇರುತ್ತದೆ ಅವರಿಗೆ ಹೆಚ್ಚಿನ ಸಮಯವನ್ನು ಕೊಡಲಿ. ಆದರೆ ಈ ಸಮಯದಲ್ಲಿ ತಮ್ಮ ಅವಗಾಹನೆಗೆ ಮತ್ತು ಅರಿಕೆ ಮಾಡಿಕೊಳ್ಳುವುದು ಇಷ್ಟೆ. ಪ್ರಾಯಶಃ ದಯವಿಟ್ಟು ಇದನ್ನು ಇಲ್ಲಿಗೇ ನಿಲ್ಲಿಸಿ ತಾವು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳತಕ್ಕಂಥದ್ದು ಒಳ್ಳೆಯದ್ದು. ಏಕೆಂದರೆ, ನಾವೇ ಮಾಡಿದಂತಹ ನಿರ್ಣಯವನ್ನು ನಾವೇ ಉಲ್ಲಂಘನೆ ಮಾಡತಕ್ಕದ್ದು ಸಭೆಗೆ ಭೂಷಣ ಪ್ರಾಯ ಅಲ್ಲ. ಮತ್ತೊಂದು ಸಾರಿ ತಮಗೆ ಹೇಳಬೇಕೆಂದರೆ, ಸದರಿ ಸೂಚನೆಗೆ ಸಹಿ ಮಾಡಿರುವ ಮೂವರು ಸದಸ್ಯರು ಮಾತ್ರ ಪ್ರಾರಂಭಿಕ ನಿವೇದನೆ ಮಾಡಬಹುದು ಎಂದು ಇರುವುದರಿಂದ ದಯವಿಟ್ಟು ನಿಯಮಾವಳಿಗಳ ಪ್ರಕಾರ ಇಲ್ಲಿಗೆ ನಿಲ್ಲಿಸಿ. ನಾಯ್ಡುರವರೇ, ನಾನು ತಮಗೆ ಮಾತನಾಡುವುದಕ್ಕೆ ಅಡ್ಡ ಬಂದಿದ್ದೇನೆಂದು ಭಾವಿಸಬೇಡಿ.

ಅಧ್ಯಕ್ಷರು:– ಈಗ ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸೋಣ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಸದಸ್ಯರುಗಳು ಏನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ ಅದು ಗಂಭೀರ ಸ್ವರೂಪದ್ದಾಗಿದೆ. ಆದುದರಿಂದ ಈ ವಿಷಯವನ್ನು ನಿಯಮ 69ರಡಿಯಲ್ಲಿ ಚರ್ಚೆ ಮಾಡಲು ಅನುಮತಿಯನ್ನು ನೀಡಿ ನಿಲುವಳಿ ಸೂಚನೆಗೆ ನನ್ನ ಒಪ್ಪಿಗೆಯನ್ನು ನಿರಾಕರಿಸಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಯಾವ ನಿಯಮದಡಿಯಲ್ಲಿ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು:– ನಿಯಮ 69ರಡಿಯಲ್ಲಿ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆ ಅವಕಾಶ ಮಾಡಿಕೊಡುತ್ತೀರಾ?

ಅಧ್ಯಕ್ಷರು:– ನಾಳೆಯೇ ಫಿಕ್ಸ್ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆ ಫಿಕ್ಸ್ ಮಾಡಿ ನಿಯಮ 69ರಡಿಯಲ್ಲಿ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು:– ಹೌದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆಯೇ ಅಜೆಂಡಾದಲ್ಲಿ ಅದು ಬರುವ ಹಾಗೆ ಮಾಡಿ. ಏಕೆಂದರೆ ವಿಷಯದ ಮಹತ್ವ ವಿಳಂಬವಾದ ಹೊರಟು ಹೋಗುತ್ತದೆ.

ಅಧ್ಯಕ್ಷರು:– ನಾಳೆಯೇ ತೆಗೆದುಕೊಳ್ಳುತ್ತೇನೆ.

11. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ

ಡಾ: ಜಿ. ಪರಮೇಶ್ವರ (ಮಧುಗಿರಿ):– ಮಾನ್ಯ ಅಧ್ಯಕ್ಷರೆ,

"ದಿನಾಂಕ 11–6–2004 ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ತಮ್ಮ ಅಪ್ಪಣೆ ಕೋರುತ್ತೇನೆ."

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ಈಗ ಆದ ಒಂದು ಸಣ್ಣ ಲೋಪಕ್ಕಾಗಿ ತಮ್ಮಲ್ಲಿ ಕ್ಷಮೆ ಯಾಚಿಸುತ್ತೇನೆ. ನಮ್ಮ

ಸೂಚಕರಾದ ಮಾನ್ಯ ಡಿ.ಆರ್. ಪಾಟೀಲ್‌ರವರ ಅನ್ಯ ನಿಮಿತ್ತ ಕಾರ್ಯಕ್ಕಾಗಿ ಹೊರಗಿರುತ್ತಾರೆ. ಆದ್ದರಿಂದ ಮಾನ್ಯ ಬಸವರಾಜ ರಾಯರೆಡ್ಡಿಯವರು ಅನುಮೋದಿಸುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಡಿ.ಆರ್. ಪಾಟೀಲ್‌ರವರಿಗೆ ಮೂವ್ ಮಾಡುವುದಕ್ಕೆ ಅವರಿಗೆ ಇಷ್ಟವಿಲ್ಲ. ಈ ಭಾಷಣ ಮಾಡಿಸಿರುವುದು ಒಬ್ಬರಿಗೆ ಇಷ್ಟವಿದ್ದರೆ, ಒಬ್ಬರಿಗೆ ಇಷ್ಟವಿಲ್ಲ. ಈಗ ನೋಡಿದರೆ ಗೊತ್ತಾಗುತ್ತದಲ್ಲಾ. ಸಮ್ಮಿಶ್ರ ಸರ್ಕಾರ ಆದರೆ ಹೀಗೆಯೇ. ಕಾಂಗ್ರೆಸ್‌ನವರು ಪ್ರೊಪೋಸ್ ಮಾಡುತ್ತಾರೆ. ಆದರೆ ನೀವು ಸೆಕೆಂಡ್ ಮಾಡುವುದಿಲ್ಲ ಎಂದರೆ ನಿಮ್ಮಲ್ಲಿಯೇ ವ್ಯತ್ಯಾಸವಿದೆ. ನಿಮಗೆ ಜೀರ್ಣವಾಗಿಲ್ಲ. ಅವರೇನೋ ಅನುಮೋದಿಸಿಕೊಂಡು ಬಿಟ್ಟರು, ಅವರ ಪಾರ್ಟಿ ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ಅದು ರೂಲಿಂಗ್ ಪಾರ್ಟಿಗೆ ಬಿಟ್ಟ ವಿಷಯ. ಯಾರೂ ಬೇಕಾದರೂ ಮಾತನಾಡಲಿ. ಆದರೆ ಮಾನ್ಯ ಎಂ.ಪಿ. ಪ್ರಕಾಶ್‌ರವರು ಸಂಸದೀಯ ಸಚಿವರಾಗಿ ಇಂಥ ಪ್ರಮುಖವಾದ ವಿಷಯದ ಬಗ್ಗೆ ಮಾನ್ಯ ಡಿ.ಆರ್. ಪಾಟೀಲರು ಮಾತನಾಡುತ್ತಾರೆ ಎಂದು ಹೇಳಿ, ಇದಕ್ಕೆ ಯಾರೂ ಸಿದ್ಧತೆಯನ್ನೇ ಮಾಡಿಕೊಳ್ಳದೆಯೇ ಇದ್ದರೆ ಹೇಗೆ? ಅಂದರೆ ರಾಜ್ಯಪಾಲರ ಭಾಷಣದಲ್ಲಿ ಚರ್ಚೆ ಮಾಡುವಂಥದ್ದು ಏನೂ ಇಲ್ಲ. ಈಗಾಗಲೇ ಆ ರೀತಿ ಅನೇಕ ಸಚಿವರುಗಳು ಹೇಳಿಕೆಗಳನ್ನು ಕೊಟ್ಟಾಗಿದೆ. ನಿಮ್ಮ ಕಾಮನ್ ಮಿನಿಮಮ್ ಪ್ರೋಗ್ರಾಂ ಪ್ರಾರಂಭವಾಗಿಲ್ಲ. ಮತ್ತೆ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನಿದೆಯೋ ಅದನ್ನು ಒಟ್ಟಾಗಿ ಸೇರಿಸಬೇಕು ಎಂದು ಇಲ್ಲ. ಆದ್ದರಿಂದ ಮುಂದೆ ಬಜೆಟ್ ವಿಷಯದಲ್ಲಿ ನಾವು ಮಾತನಾಡುತ್ತೇವೆಂದು ಹೇಳಿ ಕೇವಲ ತಾತ್ಕಾಲಿಕವಾಗಿ ಏನೋ ಒಂದು ಕುಂಟು ನೆಪ, ಒಂದು ಪದ್ಧತಿಯಂತೆ ಆಗಿ ಬಿಡಬೇಕು ಎಂದು ಹೇಳಿ ರಾಜ್ಯಪಾಲರ ಭಾಷಣ ಮಾಡಿಸಿರುವಂಥದ್ದೂ ಸಹ ಭಾಷಣದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಅಂದರೆ ಇದು ಯಾರಿಗೂ ಗೌರವ ತರುವಂಥದ್ದಲ್ಲ. ಈಗಾಗಲೇ ಸರ್ಕಾರ ರಚನೆಯಾಗಿ ಒಂದು ತಿಂಗಳಾಯಿತು. ಇನ್ನೂ ಪೂರ್ತಿ ಮಂತ್ರಿ ಮಂಡಲ ಆಗಿಲ್ಲ. ಈ ರೀತಿಯಾದರೆ ರಾಜ್ಯದ ಜನರ ಗತಿ ಏನಾಗಬೇಕು?

ಅಧ್ಯಕ್ಷರು:– ಇಂಥ ವಿಚಾರಗಳಲ್ಲಿ ಸರ್ಕಾರ ಎಚ್ಚರವಾಗಿ ಇರಬೇಕು ಎನ್ನತಕ್ಕಂಥ ಮನವಿಯನ್ನು ಮಾಡುತ್ತಾ ಈಗ ಮಾನ್ಯ ಬಸವರಾಜ ರಾಯರೆಡ್ಡಿಯನ್ನು ಸದರಿ ಸೂಚನೆಗೆ ಅನುಮೋದನೆ ಕೊಡಬೇಕು.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ): ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

12. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಮಾಣದ ಮೇಲಿನ ಚರ್ಚೆ

+ಡಾ: ಜಿ. ಪರಮೇಶ್ವರ್ (ಮಧುಗಿರಿ): ಮಾನ್ಯ ಅಧ್ಯಕ್ಷರೇ, ಭಾರತದ ಸಂವಿಧಾನದ 176ನೇ ಅನುಚ್ಛೇದದಡಿ ಏನು ಗೌರವಾನ್ವಿತ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಹೊಸ ಸರ್ಕಾರದ ರೂಪುರೇಷೆಗಳನ್ನು ಸದನಕ್ಕೆ ತಿಳಿಸಿದ್ದಾರೆ. ಸದನದ ನಿಯಮಾವಳಿ 20ರ ಪ್ರಕಾರ ನಾನು ಸನ್ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ನನ್ನ ಭಾಷಣವನ್ನು ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿ ಹೊಸದಾಗಿ ಆರಿಸಿ ಬಂದಿರುವ ಸುಮಾರು